


ಕನ್ನಡಕ್ಕೆ ಮುಕ್ತವಾದ ಹೊಸ ಗಾಳಿ ಬೆಳಕಿನ ಬಗೆಬಗೆ ಕಿಟಕಿ ಬಾಗಿಲುಗಳನ್ನು ತೆರೆದ, ಅಲೆಯಾಗಿ ತುಯ್ಯುವ ಧೀರೋದಾತ್ತ ಮನಸ್ಸಿನ ಕಾರ್ನಾಡರ ಕ್ರಿಯಾಶೀಲತೆಯ ಕುರಿತಂತೆ ಬರೆದ ಆಪ್ತ ಬರಹ.

# ಖಾನೆಸುಮಾರಿಗೆ ಸಿಗದ ಘನವಂತ

**ಜಯಂತ ಕಾಯ್ಕಿಣಿ**

ಕ್ರಿಕೆಟ್ಟಿನಲ್ಲಿ ಯಾವುದೇ ಹೊಸ ಬ್ಯಾಟ್ಸ್‌ಮನ್ ಆಡಲು ಕ್ರೀಸ್‌ಗೆ ಬಂದಾಗ ಅವನ ಎದುರು ಹಿರಿಯ, ನುರಿತ, ಪಳಗಿದ ಬ್ಯಾಟ್ಸ್‌ಮನ್ ಇನ್ನೊಂದು ಬದಿಯಲ್ಲಿದ್ದರೆ ಸಿಗುವ ಧೈರ್ಯ, ಸ್ಫೂರ್ತಿ ಮತ್ತು ಸುರಕ್ಷಿತ ಭಾವವೇ ಬೇರೆ! ಏಕೆಂದರೆ ಆ ಹಿರಿಯರು ಅದಾಗಲೇ ಆ ಎಳೆಯರ ಸಂವೇದನೆಯ ಭಾಗವಾಗಿರುತ್ತಾರೆ, ಕೌಶಲ ಕಾಣ್ಕೆ ಎರಡನ್ನೂ ರೂಪಿಸಿರುತ್ತಾರೆ. ಇಷ್ಟೇ ಅಲ್ಲ, ಇನ್ನೂ ಕ್ರಿಯಾಶೀಲರಾಗಿ, ಆಟದಲ್ಲಿ ಅಷ್ಟೇ ಎಚ್ಚರ ಮತ್ತು ತನ್ಮಯತೆಯಿಂದ ಈ ಹೊಸ ಆಟಗಾರನನ್ನೇ ನೋಡುತ್ತ, ಅವನಿಗೆ ರನ್ ಕೊಡಲು ತುಡದಿಗಾಲಲ್ಲಿ ಕಾಯುತ್ತ ನಿಂತಿರುತ್ತಾರೆ. ಅವರು ತನ್ನ ಆಟವನ್ನು ನೋಡುತ್ತಿದ್ದಾರೆ ಎನ್ನುವುದಕ್ಕಿಂತ ಮಿಗಿಲಾದ ಹುರುಪು ಬೇರೆ ಏನಿದೆ ಈ ಹೊಸಬನಿಗೆ! ಹಾಗೆ ನನ್ನ ವಾರಿಗೆಯ ಬರಹಗಾರರಿಗೆ, ನಾನ್‌ಸ್ಟ್ರೈಕರ್ ಬದಿಯಲ್ಲಿ ನಿಂತು ಒಂದು ಪ್ರಬಲ ವರ್ಚಸ್ವೀ ಚುಂಬಕಗಾಳಿಯಂಥ ಆವರಣವನ್ನು ಕಲ್ಪಿಸಿಕೊಟ್ಟ ಧೀಮಂತರಲ್ಲಿ ಗಿರೀಶ ಕಾರ್ನಾಡ ಒಬ್ಬರು. ಕಳೆದ ಆರು ದಶಕಗಳಿಂದ ಕನ್ನಡವೆಂಬ ಮನಸ್ಸಿಗೆ ಮುಕ್ತವಾದ ಹೊಸ ಗಾಳಿ ಬೆಳಕಿನ ಬಗೆಬಗೆ ಕಿಟಕಿ ಬಾಗಿಲುಗಳನ್ನು ತೆರೆದವರು. ಬರೀ ಕನ್ನಡವಷ್ಟೇ ಅಲ್ಲ, ಇಡೀ ದೇಶದ ಹೊಸ ಪೀಳಿಗೆಗಳ ಸಂವೇದನೆಯನ್ನು, ಸಿನಿಮಾ ರಂಗಭೂಮಿಗಳ ಒಕ್ಕಣಿಕೆಯನ್ನು ಬೇಷರತ್ತಾಗಿ ಅಂತಃಕರಣಪೂರ್ವಕವಾಗಿ ವಿಸ್ತರಿಸಿದವರು. ಹಾಗೆಲ್ಲ ಖಾನೆಸುಮಾರಿಗೆ ಸಿಗುವಂಥ ಪ್ರತಿಭೆಯಲ್ಲ ಅದು. ಅವರ ಬಗ್ಗೆ ಮಾತನಾಡಲೂ ಒಂದು ಅರ್ಹತೆ ಬೇಕು. ಖಂಡಿತ ಆ ಅರ್ಹತೆ ನನಗಿಲ್ಲ.

ಅವರ ಕೃತಿಗಳ ಮತ್ತು ಅವರ ಸಂವೇದನೆಯ ಆವರಣದಲ್ಲಿ ರೂಪುಗೊಂಡ ವಿಜಯ ತೆಂಡೂಲ್ಕರ್, ಸತ್ಯದೇವ ದುಬೇ, ಶ್ಯಾಮ್ ಬೆನಗಲ್, ಅಮರೀಶ್ ಪುರಿ, ಶಬಾನಾ ಆಝ್ಮಿ, ಅನಂತನಾಗ್, ಶಂಕರನಾಗ್, ಸ್ಮಿತಾ ಪಾಟೀಲ, ಜಬ್ಬಾರ ಪಟೇಲ, ಪಟ್ಟಾಭಿರಾಮ ರೆಡ್ಡಿ, ಗೋವಿಂದ ನಿಹಲಾನಿ, ಅಪೂರ್ವ ಕಿಶೋರ್ ಬೀರ್, ಬಿ.ವಿ. ಕಾರಂತ, ರಾಜೀವ ತಾರಾನಾಥ್, ಭಾಸ್ಕರ್ ಚಂದಾವರ್ಕರ್, ಅಮಲ್ ಅಲ್ಲಾನಾ, ವಿಜಯಾ ಮೆಹ್ತಾ, ನಾಸಿರುದ್ದೀನ್ ಶಾ, ಕುಲಭೂಷಣ್